**S.C. 20/2022.**

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ,**
**ಇವರ ನ್ಯಾಯಾಲಯದಲ್ಲಿ.**

**ಸತ್ರ ಮೊಕದ್ದಮೆ ಸಂಖ್ಯೆ: 20/2022.**

| | | | |
|---|---|---|---|
| ಹೆಸರು | : | ಹುಲಿಗೆಪ್ಪ ವಡ್ಡರ | ಫ್ರಾಸಾ-20 |
| ತಂದೆಯ ಹೆಸರು | : | ದುರ್ಗಪ್ಪ | ಚಾಸಾ-34 |
| ವಯಸ್ಸು | : | 40 ವರ್ಷ | |
| ಉದ್ಯೋಗ | : | ಪಿ.ಡಿ.ಓ | |
| ವಾಸಸ್ಥಳ | : | ಜಮ್ಮಲದಿನ್ನಿ ಗ್ರಾಮಪಂಚಾಯಿತಿ | |

ದಿನಾಂಕಃ 22-11-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ನಾನು ದಿನಾಂಕಃ 02-11-2020 ರಿಂದ ಇಲ್ಲಿಯವರೆಗೆ ಜಮ್ಮಲದಿನ್ನಿ ಗ್ರಾಮಪಂಚಾಯಿತಿಯಲ್ಲಿ ಪಿ.ಡಿ.ಓ ಅಂತಾ ಕೆಲಸ ಮಾಡುತ್ತಿದ್ದೇನೆ.

ತನಿಖಾಧಿಕಾರಿ ಆರೋಪಿತರ ಮನೆಯ ಉತಾರ ಕೇಳಿದ್ದು ದಿನಾಂಕಃ 18.12.2021 ರಂದು ಕೊಟ್ಟಿದ್ದೇನೆ. ಅವುಗಳನ್ನು ನಿಪಿ-37 ರಿಂದ 39 ಅಂತಾ, ಸಹಿಯನ್ನು ನಿಪಿ-37(ಎ) ರಿಂದ 39(ಎ) ಅಂತಾ ಗುರುತಿಸಲಾಯಿತು.

**ಪಾಟಿಸವಾಲುಃ ಆರೋಪಿತರ ಪರ ಶ್ರೀ.ಎ.ಬಿ.ಜೆ ವಕೀಲರಿಂದ.**

ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

22-11-2024
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.

**S.C. 20/2022.**

# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ, ಇವರ ನ್ಯಾಯಾಲಯದಲ್ಲಿ.

**ಸತ್ರ ಮೊಕದ್ದಮೆ ಸಂಖ್ಯೆ: 20/2022.**

| | | | |
|---|---|---|---|
| ಹೆಸರು | : | ವೆಂಕಟೇಶ ಹೂಲಗೇರಿ | ಪ್ರಾಸಾ-19 |
| ತಂದೆಯ ಹೆಸರು | : | ಹಣಮಂತಪ್ಪ | ಚಾಸಾ-33 |
| ವಯಸ್ಸು | : | 40 ವರ್ಷ | |
| ಉದ್ಯೋಗ | : | ಎ.ಇ.ಇ | |
| ವಾಸಸ್ಥಳ | : | ಬೆಂಗಳೂರು | |

ದಿನಾಂಕಃ 22-11-2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ.**

ನಾನು ದಿನಾಂಕಃ 12-06-2012 ರಿಂದ 20-08-2024 ರವರೆಗೆ ಹುನಗುಂದದಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿ ಕೆಲಸ ಮಾಡಿದ್ದೇನೆ.

ದಿನಾಂಕಃ 23-12-2021 ರಂದು ತನಿಖಾಧಿಕಾರಿಗಳು ನಕ್ಷೆ ಪೂರೈಸುವಂತೆ ಮನವಿ ಮಾಡಿದ್ದು ಚಾಸಾ-32 ಇವರು ಸ್ಥಳ ತೋರಿಸಿದ ಮೇರೆಗೆ ಅದೇ ದಿನ ನಕ್ಷೆ ರಚನೆ ಮಾಡಿದ್ದು ಅದನ್ನು ನಿಪಿ-36 ಎಂದು ಮತ್ತು ಸಹಿಯನ್ನು ನಿಪಿ-36(ಎ) ಅಂತಾ ಗುರುತಿಸಲಾಯಿತು.

**ಪಾಟಿಸವಾಲುಃ ಆರೋಪಿತರ ಪರ ಶ್ರೀ.ಎ.ಬಿ.ಜೆ ವಕೀಲರಿಂದ.**

ಗುನ್ನೆ ನಡೆದಿದೆ ಎನ್ನಲಾದ ಸ್ಥಳದಲ್ಲಿ ಅಡುಗೆ ಕೋಣೆಗೆ ಪ್ರತ್ಯೇಕ ಪಾರ್ಟಿಷನ್ ಮಾಡಲಾಗಿದೆ. ಅದರ ಎತ್ತರ 4 ಅಡಿ ಇರುತ್ತದೆ. ಅಡುಗೆ ಮಾಡುವ ಸ್ಥಳದಲ್ಲಿ ಯಾರಾದರೂ ಕುಳಿತರೆ ಹಾಲ್ ಮತ್ತು ಮುಖ್ಯದ್ವಾರದಲ್ಲಿ ನಿಂತವರು ಕಾಣುವುದಿಲ್ಲ ಎನ್ನುವುದು ನಿಜ. ನಾನು ಸದರಿ ಸ್ಥಳಕ್ಕೆ ಹೋದಾಗ ಚಾಸಾ-32 ಹೊರತುಪಡಿಸಿ ಬೇರೆ ಯಾರೂ ಮನೆಯಲ್ಲಿರಲಿಲ್ಲ. ಗುನ್ನಾ ಸ್ಥಳವನ್ನು ಚಾಸಾ-32 ತೋರಿಸಿದ್ದಾರೆ.

ಗುನ್ಹಾ ಸ್ಥಳದ ಅಕ್ಕ-ಪಕ್ಕದಲ್ಲಿ ಸಾಕಷ್ಟು ಮನೆಗಳಿರುತ್ತವೆ ಎನ್ನುವುದು ಸರಿಯಲ್ಲ, ಕೇವಲ 2-3 ಮನೆಗಳಿವೆ. ನಾನು ಸ್ಥಳಕ್ಕೆ ಹೋದಾಗ ಅಲ್ಲಿ ರಕ್ತದ ಕಲೆಗಳು ಕಂಡು ಬರಲಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಪೋಲಿಸರಿಗೆ ಅನುಕೂಲವಾಗುವಂತೆ ಸುಳ್ಳು ನಕ್ಷೆ ತಯಾರಿಸಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

22-11-2024
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಾಗಲಕೋಟೆ.